ಗಮನ ಕೊಟ್ಟು ಅವುಗಳನ್ನು ಇತ್ಯರ್ಥ ಮಾಡುವುದರಲ್ಲಿ ಸರ್ಕಾರಿ ನೌಕರರು ಜಾಗರೂಕತೆಯಿಂದ ವರ್ತಿಸಬೇಕು. ಲೋಕ ಸಭಾ ಸದಸ್ಯರು ಹಾಗೂ ಶಾಸಕರುಗಳು ಸೂಚಿಸುವಂತಹ ಕಾರ್ಯಗಳನ್ನು ಪೂರೈಸುವಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಅವರು ನೆರವಾಗಬೇಕು. ಇದನ್ನು ಪ್ರತಿಯೊಬ್ಬ ಅಧಿಕಾರಿಯೂ ಗಮನದಲ್ಲಿಟ್ಟುಕೊಳ್ಳಬೇಕು. ಒಂದು ವೇಳೆ ಸದಸ್ಯರು ನೀಡಿದಂತಹ ಸಲಹೆಗಳನ್ನು ಇತ್ಯರ್ಥ ಮಾಡಲು ಅಸಾಧ್ಯವಾದಂತಹ ಸಂದರ್ಭದಲ್ಲಿ ತುಂಬಾ ವಿನಯದಿಂದ ಕಾರ್ಯಗತ ಮಾಡಲಾಗದಿರುವುದಕ್ಕೆ ಇರುವಂತಹ ಕಾರಣಗಳನ್ನು ಆ ಅಧಿಕಾರಿ ವಿವರಿಸಬೇಕು. ಲೋಕಸಭಾ ಸದಸ್ಯರು ಮತ್ತು ಶಾಸಕರುಗಳ ಸಂದರ್ಶನಕ್ಕೆ ಆದ್ಯತೆಯನ್ನು ಕೊಡಬೇಕು. ಲೋಕಸಭಾ ಸದಸ್ಯರು ಮತ್ತು ಶಾಸಕರುಗಳು ಒಬ್ಬ ಅಧಿಕಾರಿಯನ್ನು ನೋಡಲು ಬಂದಾಗ ಆ ಅಧಿಕಾರಿ ಎದ್ದು ನಿಂತು ಅವರನ್ನು ಬರಮಾಡಿಕೊಳ್ಳಬೇಕು. ಮತ್ತು ಅವರು ಹೋಗುವಾಗಲೂ ಅಷ್ಟೆ.

ಸರ್ಕಾರದ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಇಲಾಖಾ ಮುಖ್ಯಸ್ಥರುಗಳು ಹಾಗೂ ಇನ್ನಿತರೆ ಉಚ್ಚ ಮಟ್ಟದ ಅಧಿಕಾರಿಗಳು ಪ್ರತಿ ದಿನ ಸಂಜೆ ಕಛೇರಿ ನಡೆಯುವ ದಿವಸ ೫.೦೦ ಗಂಟೆಯಿಂದ ೬.೦೦ ಗಂಟೆಯವರೆಗೆ ಸಾರ್ವಜನಿಕರಿಗೆ, ಲೋಕ ಸಭಾ ಸದಸ್ಯರುಗಳಿಗೆ ಹಾಗೂ ಶಾಸಕರುಗಳಿಗೆ ಸಂದರ್ಶನವನ್ನು ನೀಡಲು ಅನುಕೂಲವಾಗುವ ಹಾಗೆ ತಮ್ಮ ಕೆಲಸ ಕಾರ್ಯಗಳನ್ನು ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಹೇಳಲಾಗಿದೆ. ಮಾನ್ಯ ಮಂತ್ರಿಗಳು ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಆಪ್ತ ಸಹಾಯಕರುಗಳು ಶಾಸಕರೊಡನೆ ವರ್ತಿಸುವ ಬಗ್ಗೆ ಈ ರೀತಿ ಸೂಚಿಸಲಾಗಿದೆ. ಶಾಸಕರುಗಳು ಸಂದರ್ಶನಕ್ಕಾಗಿ ಮಂತ್ರಿಗಳ ಬಳಿಗೆ ಹೋದಾಗ ಅವರ ಆಪ್ತ ಕಾರ್ಯದರ್ಶಿಗಳು ಹಾಗೂ ಆಪ್ತ ಸಹಾಯಕರುಗಳು ಅವರನ್ನು ಸೌಜನ್ಯದಿಂದ ಬರಮಾಡಿಕೊಂಡು ಕುಳಿತುಕೊಳ್ಳಲು ಆಸನವನ್ನು ಒದಗಿಸಿಕೊಡುವುದಲ್ಲದೆ ಬಂದಿರುವಂತಹ ವಿಷಯವನ್ನು ಮಂತ್ರಿಗಳ ಗಮನಕ್ಕೆ ತರಬೇಕು. ಮತ್ತು ಮಂತ್ರಿಗಳ ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗನೆ ಅವರ ಸಂದರ್ಶನಕ್ಕೆ ಅವಕಾಶವನ್ನು ಒದಗಿಸಿಕೊಡಬೇಕು. ಇವಿಷ್ಟು ಆದೇಶಗಳನ್ನು ನೀಡಲಾಗಿದೆ. ಇದು ಅದರ ಸಾರಾಂಶ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿದ ಹಾಗೆ ಜಿಲ್ಲಾಧಿಕಾರಿಗಳು ಮತ್ತು ಮೇಲ್ಪಟ್ಟ ಅಧಿಕಾರಿಗಳ ವರ್ತನೆ ಇದೆ. ಅದು ನನ್ನ ಅನುಭವ ಕೂಡ. ಆದರೆ ಕೆಳಮಟ್ಟದ ಅಧಿಕಾರಿಗಳು ಶಾಸಕರುಗಳೊಡನೆ ವರ್ತಿಸಿರುವ ವರ್ತನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಲಕ್ಷ್ಯ ವಹಿಸಿದ್ದಾರೋ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಯಾವುದಾದರೂ ನಿರ್ದಿಷ್ಟ ಉದಾಹರಣೆಯನ್ನು ಕೊಟ್ಟರೆ ಇಂತಹ ಅಧಿಕಾರಿ, ಇಂತಹ ದಿವಸ ಇಂತಹವರು ಹೋದಾಗ ಸೌಜನ್ಯದಿಂದ ನೋಡಲಿಲ್ಲ ಎಂಬುದನ್ನು ಹೇಳಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

## ರಾಜ್ಯದಲ್ಲಿನ ಅರಣ್ಯ ವಿಭಾಗಗಳಲ್ಲಿ ಆನೆಗಳನ್ನು ಕೊಂದಿರುವ ಬಗ್ಗೆ

೫೫. ಶ್ರೀ ಜಿ. ರಾಜೂಗೌಡ (ಸನ್ನೂರು).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೪೭ರಿಂದ ೧೯೬೭ರವರೆಗೆ ರಾಜ್ಯದ ಯಾವ ಯಾವ ಅರಣ್ಯ ವಿಭಾಗಗಳಲ್ಲಿ ಆನೆಗಳ ಕೊಂಬನ್ನು ಕದ್ದು ಬೇರೆಲ್ಲಿ ಎಷ್ಟು ಆನೆಗಳನ್ನು ಗುಂಡಿಕ್ಕಿ ಕೊಂದಿದ್ದಾರೆ ?

ಆ) ಇವುಗಳ ಪೈಕಿ ಎಷ್ಟನ್ನು ಹುಡುಕಿ ಹಚ್ಚಲಾಗಿದೆ ?

ಇ) ಇಂತಹ ಕೃತ್ಯಗಳು ಇನ್ನು ಮುಂದೆ ನಡೆಯದಂತೆ ಸರ್ಕಾರ ಮಾಡಿರುವ ಏರ್ಪಾಡಿಕೆ ಕಾರ್ಯಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ರಾಜ್ಯ ಅರಣ್ಯ ಸಚಿವರು).

ಅ) ವಿವರಗಳು ಈ ಕೆಳಗಿನಂತಿವೆ

| ವಿಭಾಗಗಳು | ೧-೪-೧೯೮೫ ರಿಂದ ೩೧-೩-೧೯೮೬ | ೧-೪-೧೯೮೬ ರಿಂದ ೩೧-೩-೧೯೮೭ | ೧-೪-೧೯೮೫ ರಿಂದ ೧೫-೧೨-೧೯೮೫ |
|---|---|---|---|
| ೧) ಕೊಳ್ಳೇಗಾಲ | ೬ | — | ೧ |
| ೨) ಚಾಮರಾಜ ನಗರ | ೨ | ೩ | ೪ |
| ೩) ಮೈಸೂರು | ೩ | — | ೧ |
| ೪) ಮಂಡ್ಯ | ೨ | — | — |
| ೫) ಹುಣಸೂರು | ೧೦ | ೧ | ೨ |
| ೬) ಮಡಿಕೇರಿ | ೧ | — | — |
| ೭) ಬೆಂಗಳೂರು | — | — | — |
| ೮) ಬನ್ನೇರುಘಟ್ಟ | — | — | ೨ |
| ೯) ಹುಲಿ ಯೋಜನೆ ಮೈಸೂರು | — | ೨ | ೩ |
| ೧೦) ಚಿಕ್ಕಮಗಳೂರು | ೧ | — | — |
| ೧೧) ವಾಗರ ಮೊಳೆ | — | — | ೧ |
| ಒಟ್ಟು ... | ೨೩ | ೬ | ೧೪ |

ಆ) ಇವುಗಳ ಪೈಕಿ ೧೯೮೫-೮೬ ನೇ ಸಾಲಿನಲ್ಲಿ ೧೯೮೫-೮೬ರಲ್ಲಿ ಕ್ರಮವಾಗಿ ೯, ೨ ಮತ್ತು ೬ ಆನೆಗಳ ಕೊಂಬುಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಈ ಎಲ್ಲ ಪ್ರಕರಣಗಳನ್ನು ದಾಖಲು ಮಾಡಿಕೊಂಡು ತನಿಖೆ ಮುಂದುವರಿಯುತ್ತಿದೆ.

ಇ) ತುರ್ತು ಸಂದೇಶ ಸಂಪರ್ಕಗಳಿಗಾಗಿ ೧೦೬ ನಿಸ್ತಂತು ಜಾಲವನ್ನು ಅಳವಡಿಸಲಾಗಿದೆ. ತುರ್ತು ಕ್ರಮ ಕೈಗೊಳ್ಳಲು ಲೋಡಿಂಗ್ ಸಾರಿಗೆ ಸಂಕರ್ಷ ಇತ್ಯಾದಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಒದಗಿಸಲು ೧೦ ಜೀಪ್‌ಗಳನ್ನು ಒದಗಿಸಲಾಗಿದೆ. ಅರಣ್ಯ ರಕ್ಷಣೆ ಪಡಾತುತ್ತಿರುವ ಅಧಿಕಾರಿಗಳಿಗೆ ಆತ್ಮ ರಕ್ಷಣೆಗೆ ೦೬ ೬ ಗುಂಡೂಕು ಪಿಸ್ತೂಲು ಮತ್ತು ೦೦೮ ಗುಂಡುಗಳನ್ನು ಸರ್ಕಾರದಿಂದ ಕೊಡಲಾಗಿದೆ. ತನ್ನ ಆತ್ಮ ರಕ್ಷಣೆಗೆ ಅವಶ್ಯವೆನಿಸಿದರೆ ೧ ೬ ಗುಂಡೂಕು ಪಿಸ್ತೂಲು ಮತ್ತು ೦೦೮ ಗುಂಡುಗಳನ್ನು ಅರಣ್ಯ ಅಧಿಕಾರಿಗಳು ಮತ್ತು ಅರಣ್ಯ ರಕ್ಷಕ ಅಧಿಕಾರಿಗಳು ಅಗತ್ಯ ಬಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ. ತಮಿಳುನಾಡು ಮತ್ತು ಕೇರಳ ರಾಜ್ಯ ವಿಧಾನದ ಅರಣ್ಯ ಮತ್ತು ಅರಣ್ಯ ರಕ್ಷಕ ಅಧಿಕಾರಿಗಳನ್ನು ಆಗಾಗ್ಗೆ ಸಂಧಿಸಿ ವಿಚಾರ ವಿನಿಮಯ ನಡೆಸಿ ಎಲ್ಲಾ ರೀತಿಯಲ್ಲೂ ದುಷ್ಕೃತ್ಯ ವನ್ನು ತಡೆಯಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಜಿ. ರಾಜುಗೌಡ : ಸಮಾನ್ಯ ಎರಡು ವರ್ಷಗಳಿಂದೀಚೆಗೆ ನಮ್ಮ ರಾಜ್ಯದಲ್ಲಿ ೪೬ ಆನೆಗಳನ್ನು ಆನೆಗಳ ದಂತಕ್ಕೋಸ್ಕರ ಗುಂಡಿಕ್ಕಿ ಕೊಂಡಿದ್ದು ಇದರಲ್ಲಿ ಕೇವಲ ೧೬ ಪ್ರಕರಣಗಳನ್ನು ಮಾತ್ರ ಪತ್ತೆ ಹಚ್ಚಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ೧೬ ಪ್ರಕರಣಗಳ ಪೈಕಿ ಅಪರಾಧಿಗಳು ಹೊರರಾಜ್ಯದವರು ಎಷ್ಟು ಜನ, ನಮ್ಮ ರಾಜ್ಯದವರು ಎಷ್ಟು ಜನ ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಬಿ. ಎ. ಜೀವಿಜಯ : ೪೬ ಆನೆಗಳ ಪತ್ತೆ ಮಾಡಿರತಕ್ಕಂತಹವರು ಸ್ವಲ್ಪ ಮಟ್ಟಿಗೆ ಹೊರ ರಾಜ್ಯದವರೆ. ಕೊಳ್ಳೇಗಾಲದಲ್ಲಿ ಈಗಾಗಲೇ ೬ ಜನರನ್ನು ಬಂಧಿಸಿ ಅವರ ಮೇಲೆ ಕೇಸನ್ನು ದಾಖಲು ಮಾಡಿದ್ದೇವೆ. ನಂತರ-ಪಿರಿಯಾಪಟ್ಟಣದಲ್ಲಿ ಏನು ಆನೆಯ ಪತ್ತೆಯಾಯಿತು, ಆನೆಯ ಪತ್ತೆ ಮಾಡಿ ದಂತಹವರನ್ನು ಬಂಧಿಸಿ ಅವರ ಮೇಲೆ ಕೇಸನ್ನು ದಾಖಲು ಮಾಡಿದ್ದೇವೆ. ಸ್ವಲ್ಪ ಮಟ್ಟಿಗೆ ಎಲ್ಲರೂ ಹೊರ ರಾಜ್ಯದವರೆ. ಇಲ್ಲಿಯ ಲೋಕಲ್ ಪೀಪಲ್ ಮುಖ್ಯವಾಗಿ ಕಾಡಿನಲ್ಲಿ ಹಾನಿ ಮಾಡತಕ್ಕ ಕಾಡು

ಕುರುಬರು ಯಾರು ಇದ್ದಾರೆ, ಅವರ ಸಹಾಯವನ್ನು ಪಡೆದು ಆನೆಯನ್ನು ಕೊಲ್ಲತಕ್ಕಂತಹ ಕೆಲಸವನ್ನು ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಕೇರಳದ ಮಂತ್ರಿಗಳು ಕೂಡ ಪತ್ರ ನವುಗೆ ಬರೆದು ಎರ್ನಾಕುಲಂನಲ್ಲಿ ಯಾರ್ಯಾರು ಇಂಥ ಕೃತ್ಯ ಮಾಡುತ್ತಿದ್ದರು ಅವರನ್ನು ಬಂಧಿಸಿರುವುದಾಗಿ ತಿಳಿಸಿದ್ದಾರೆ. ಹೆಚ್ಚಿನ ಮಟ್ಟಿಗೆ ಹೊರರಾಜ್ಯದವರು ಈ ಕೃತ್ಯವನ್ನು ಮಾಡಿದ್ದಾರೆ. ಆದರೆ ಎಷ್ಟು ಜನ ಮಾಡಿದ್ದಾರೆಂದು ಸಂಖ್ಯೆಯನ್ನು ಹೇಳುವುದಕ್ಕೆ ನನ್ನಲ್ಲಿ ಮಾಹಿತಿ ಇಲ್ಲ.

ಶ್ರೀ ಜಿ. ರಾಜಗೌಡ.—ತಾವು ತುರ್ತು ಸಂದೇಶ ಇನ್ನಿತರ ಕಾರ್ಯಕ್ರಮಗಳನ್ನು ಕೈಗೊಂಡ ಮೇಲೆ ಎಷ್ಟು ಆನೆಗಳನ್ನು ಸಾಯಿಸಿದ್ದಾರೆ ? ನಮ್ಮ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಸಂಭವಿಸಿದ ಮೇಲೆ ಬಂಡೀಪುರ ಅರಣ್ಯ ವಲಯದ ಆನೆಗಳು ಕೇರಳಕ್ಕೆ ಹೋಗಿವೆ ಎಂಬುದು ನಿಜವೆ ? ಹೋಗಿದ್ದರೆ ಎಷ್ಟು ಹೋಗಿವೆ ?

ಶ್ರೀ ಬಿ. ಎ. ಜೀವಿಜಯ.—ಆನೆಗಳು ಎಷ್ಟು ಹೋಗಿವೆ ಎಂದು ಹೇಳುವುದು ಕಷ್ಟ ಏಕೆಂದರೆ ಅದರ ವಿಸ್ತೀರ್ಣ ೯೦೦ ಕಿ.ಮೀ. ಇದೆ. ಆದ್ದರಿಂದ ತಮಿಳ್ನಾಡಿಗೆ ಅಲ್ಲಿಂದ ಎಷ್ಟು ಆನೆಗಳು ಹೋಗಿವೆ ಎಂದು ಹೇಳುವುದೂ ಕಷ್ಟವಾಗುತ್ತದೆ. ನಮ್ಮ ರಾಜ್ಯದಲ್ಲಿ ೩೬೦ ಆನೆಗಳಿವೆ. ಅವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುತ್ತವೆ. ಬಂಡೀಪುರದಲ್ಲಿ ನೀರು ಕಡಿಮೆ ಇದ್ದರೂ ಬೋರ್‌ವೆಲ್ ಮಾಡಿ ನೀರನ್ನು ಒದಗಿಸುತ್ತಿದ್ದೇವೆ ತಮಿಳ್ನಾಡಿನವರು ಎಷ್ಟು ಆನೆಗಳನ್ನು ಕೊಂದಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ, ಈಗಾಗಲೇ ೧೦೬ ನಿಸ್ತಂತು ಜಾಲಗಳನ್ನು ನಮ್ಮ ಇಲಾಖೆಯ ವತಿಯಿಂದ ಅಳವಡಿಸಿದ್ದೇವೆ. ಮುಂದೆ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೧೨೦ ನಿಸ್ತಂತು ಜಾಲಗಳನ್ನು ಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

## ಕುಮದ್ವತಿ ನದಿ ಸೇತುವೆ ಕಟ್ಟಡ ನಿರ್ಮಾಣದ ಬಗ್ಗೆ

೨೬೫. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ತಾಲೂಕು ಸಾಲೂರು ರಸ್ತೆಯಲ್ಲಿ ಕುಮದ್ವತಿ ನದಿಗೆ ಕಟ್ಟುತ್ತಿರುವ ಸೇತುವೆ ಕೆಲಸ ಪ್ರಾರಂಭವಾದದ್ದು ಯಾವಾಗ?

ಆ) ಕೆಲಸ ಮುಂದೆತಿಯಿಂದ ಸಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಳೇ ಸೇತುವೆ ಸಂಪೂರ್ಣ ಹಾಳಾಗಿರುವುದರಿಂದ ಆಗಾಗ್ಗೆ ಅಪಘಾತಗಳು ನಡೆಯುತ್ತಿರುವುದೂ ಸರಕಾರದವರ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ, ಅವುಗಳನ್ನು ದುರಸ್ತಿಗೊಳಿಸಲು ಕೈಕೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೮೨ ನೇ ಇಸವಿ ಏಪ್ರಿಲ್ ತಾಹೆಯಲ್ಲಿ ಕೆಲಸ ಪ್ರಾರಂಭವಾಯಿತು.

ಆ-ಇ-ಈ) ಕೆಲಸವನ್ನು ತೆಗೆದುಕೊಂಡ ಕಂಟ್ರಾಕ್ಟರು ನಿಗದಿಪಡಿಸಿದ ಪ್ರಗತಿಯನ್ನು ಕೊಡದೆ ಇದ್ದ ಕಾರಣ ಅವನ ಗುತ್ತಿಗೆಯನ್ನು ರದ್ದುಪಡಿಸಲಾಯಿತು. ಈಗ ಹೊಸ ಕಂಟ್ರಾಕ್ಟರನ್ನು ಗೊತ್ತು ಮಾಡಿ ಕೆಲಸವನ್ನು ಆರಂಭಿಸಲಾಗಿದೆ. ಮತ್ತು ಜೂನ್ ೧೯೮೬ ರ ವೇಳೆಗೆ ಹೊಸ ಸೇತುವೆಯು ಕೆಲಸ ಮುಗಿಯುವ ನಿರೀಕ್ಷೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಹಳಷ್ಟು ದೊಡ್ಡ ಕಂಟ್ರಾಕ್ಟರುಗಳು ಕೆಲಸ ಹಿಡಿದ ಮೇಲೆ ಅರ್ಧಂಬರ್ಧ ಮಾಡಿ ಬಿಟ್ಟು ಹೋಗುತ್ತಿದ್ದಾರೆ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಕಷ್ಟವಾಗುತ್ತದೆ. ಆದ್ದರಿಂದ, ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವ ಯೋಚನೆಯನ್ನು ಸರ್ಕಾರ ಏನಾದರೂ ಮಾಡಿದೆಯೆ ? ೨-೩ ತಿಂಗಳಲ್ಲಿ ೩-೪ ಘಟನೆಗಳು ಈ ರೀತಿ ನಡೆದಿವೆ. ಹಾಲಿ ಇರತಕ್ಕ ಸೇತುವೆಯನ್ನು ಒಂದು ದಿವಸವು ಕೂಡ ಉಪಯೋಗಿಸುವಂತೆ ಇಲ್ಲ. ಸಧ್ಯಕ್ಕೆ ಓಡಾಡುವಂತೆ ಅದನ್ನು ರಿಪೇರಿ ಮಾಡಲಿಕ್ಕೆ ಸಾಧ್ಯವೇ ? ಮತ್ತು ಹೊಸ ಸೇತುವೆಯ ಕೆಲಸವನ್ನು ಜೂನ್ ೧೯೮೬ ರೊಳಗೆ ಮುಗಿಸುವುದಕ್ಕೆ ಸಾಧ್ಯವೆ ?